# 2010

## PUBLIC ADMINISTRATION

### Paper 1

*Time : 3 Hours ]* *[ Maximum Marks : 300*

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

**1.** (a) Cite five important differences between private and public administration.

(b) Outline five essential conditions necessary for delegation.

(c) Give five attributes of informal organisation.

(d) Outline five important characteristics of Fred Riggs Prismatic Model in Comparative Administration.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಖಾಸಗಿ ಆಡಳಿತಕ್ಕೂ ಮತ್ತು ಸಾರ್ವಜನಿಕ ಆಡಳಿತಕ್ಕೂ ಇರುವ ಪ್ರಮುಖವಾದ ಐದು ವ್ಯತ್ಯಾಸಗಳನ್ನು ತಿಳಿಸಿ.

   (ಬಿ) ಪ್ರತ್ಯಾಯೋಜನೆಗೆ (delegation) ಅತ್ಯಗತ್ಯವಾಗಿ ಇರಬೇಕಾದ ಐದು ಷರತ್ತುಗಳನ್ನು ನಿರೂಪಿಸಿ.

   (ಸಿ) ಅನೌಪಚಾರಿಕ ಸಂಸ್ಥೆಯ ಐದು ಗುಣ-ಲಕ್ಷಣಗಳನ್ನು ತಿಳಿಸಿ.

   (ಡಿ) ತೌಲನಿಕ ಆಡಳಿತದಲ್ಲಿ, ಫ್ರೆಡ್‌ರಿಗ್ಸ್ ಪ್ರಿಸ್ಮಾಟಿಕ್ ಮಾದರಿಯ ಐದು ಪ್ರಮುಖ ವಿಶಿಷ್ಟತೆಗಳನ್ನು ನಿರೂಪಿಸಿ.

## PART B

*10×10=100*

*Answer each question in about 100 words. Each question carries 10 marks.*

2. Compare the role of Public Administration in developed and developing countries.

3. Broadly examine the evolution of Public Administration as a discipline.

4. Critically analyse the emergence of New Public Administration in 1970s.

5. Briefly explain the meaning, sources and content of administrative law.

6. Critically examine the concept of authority in organisation. You could include contribution of Max Weber.

7. Briefly discuss the notion of conduct and discipline in public services.

8. Examine the essentials of promotion system and the principles used for promotion in civil services.

9. Elucidate the arguments in favour of separating accounts from audit.

10. Elaborate on the Departmental form of organisation.

11. Discuss Downsizing government in the context of the New Public Management orientation of Public Administration in the 1990s.

**ಭಾಗ B** *10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಸಾರ್ವಜನಿಕ ಆಡಳಿತವು ವಹಿಸುವ ಪಾತ್ರವನ್ನು ಹೋಲಿಸಿ ಬರೆಯಿರಿ.

**3.** ಸಾರ್ವಜನಿಕ ಆಡಳಿತವು ಒಂದು ಅಧ್ಯಯನದ ಕ್ಷೇತ್ರವಾಗಿ ವಿಕಾಸಗೊಂಡ ಕ್ರಮವನ್ನು ಸ್ಥೂಲವಾಗಿ ಪರಿಶೀಲಿಸಿ.

**4.** 1970ರ ದಶಕದಲ್ಲಿ ನವಸಾರ್ವಜನಿಕ ಆಡಳಿತವು ಉಗಮಿಸಿದ್ದನ್ನು ಕುರಿತು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

**5.** ಆಡಳಿತಾತ್ಮಕ ಕಾನೂನಿನ ಅರ್ಥ, ಮೂಲಗಳು ಹಾಗೂ ಅದು ಒಳಗೊಂಡಿರುವ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

**6.** ಸಂಸ್ಥಾ ವ್ಯವಸ್ಥೆಯಲ್ಲಿ ಅಧಿಕಾರದ (Authority) ಪರಿಕಲ್ಪನೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ. ಮ್ಯಾಕ್ಸ್ ವೆಬರ್‌ನ ಕೊಡುಗೆಯನ್ನು ಇದರಲ್ಲಿ ಸೇರಿಸಬಹುದು.

**7.** ಸಾರ್ವಜನಿಕ ಸೇವೆಗಳಲ್ಲಿ ನಡವಳಿಕೆ ಮತ್ತು ಶಿಸ್ತಿನ ಕಲ್ಪನೆ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿ.

**8.** ಪದೋನ್ನತಿ ವ್ಯವಸ್ಥೆಯ ಅತ್ಯವಶ್ಯವಾದ ಅಂಶಗಳನ್ನು ಪರಿಶೀಲಿಸಿ ಮತ್ತು ನಾಗರಿಕ ಸೇವೆಗಳಲ್ಲಿ ಪದೋನ್ನತಿಗಾಗಿ ಬಳಸುವ ತತ್ವಗಳನ್ನು ತಿಳಿಸಿ.

**9.** ಲೆಕ್ಕ ಪತ್ರಗಳನ್ನು ಲೆಕ್ಕಪರಿಶೋಧನೆಯಿಂದ ಪ್ರತ್ಯೇಕಿಸುವುದರ ಪರವಾಗಿ ಮಂಡಿಸಲ್ಪಡುವ ವಾದಗಳನ್ನು ನಿರೂಪಿಸಿ.

**10.** ಸಂಸ್ಥಾ ವ್ಯವಸ್ಥೆಯ ಇಲಾಖಾ ರೂಪ (departmental form) ವನ್ನು ಕುರಿತು ವಿಶದವಾಗಿ ಬರೆಯಿರಿ.

**11.** 1990ರ ದಶಕದಲ್ಲಿ, ಸಾರ್ವಜನಿಕ ಆಡಳಿತವು ಹೊಸದಾಗಿ ಸಾರ್ವಜನಿಕ ವ್ಯವಸ್ಥಾಪನೆಯ ದೃಷ್ಟಿಕೋನ ಪಡೆದುಕೊಂಡಿರುವ ಹಿನ್ನೆಲೆಯಲ್ಲಿ ಹಣ ಮತ್ತು ಗಾತ್ರದ ದೃಷ್ಟಿಯಿಂದ ಸರ್ಕಾರವನ್ನು ತಗ್ಗಿಸುವ (Downsizing) ವಿಷಯ ಕುರಿತು ಚರ್ಚಿಸಿ.

[Turn over

## PART C

*6×15=90*

*Answer each question in about 150 words. Each question carries 15 marks.*

**12.** Briefly explain the Organisation Theory of Scientific Management emphasizing the contribution of F.W. Taylor. You could briefly assess its strengths and limitations.

**13.** Examine the basic tenets of Human Relations Theory in Public Administration.

**14.** Briefly elucidate the meaning of line and staff in organisation and the problems related to line and staff praxis.

**15.** Assess the means for effective Legislative Control over Administration in Parliamentary System of Government.

**16.** Assess the legitimacy and opportunity for Judicial Control over Administration.

**17.** Analyze the principle of hierarchy in structuring an organisation. Do you see any problems of applying this principle in organisations ? Explain.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ವೈಜ್ಞಾನಿಕ ನಿರ್ವಹಣೆಯ ಸಂಸ್ಥಾ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ವಿವರಿಸಿ. ಈ ಸಿದ್ಧಾಂತಕ್ಕೆ ಎಫ್.ಡಬ್ಲ್ಯೂ. ಟೇಲರ್ ನೀಡಿದ ಕೊಡುಗೆಯನ್ನು ವಿಶೇಷವಾಗಿ ನಿರೂಪಿಸಿ. ಈ ಸಿದ್ಧಾಂತದ ಶಕ್ತಿ ಹಾಗೂ ಮಿತಿಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಮೌಲ್ಯ ನಿರ್ಧಾರಮಾಡಬಹುದು.

**13.** ಸಾರ್ವಜನಿಕ ಆಡಳಿತದಲ್ಲಿ ಮಾನವ ಸಂಬಂಧಗಳ ಸಿದ್ಧಾಂತದ ಮೂಲ ತತ್ವಗಳನ್ನು ಪರಿಶೀಲಿಸಿ.

**14.** ಸಂಸ್ಥಾ ವ್ಯವಸ್ಥೆಯಲ್ಲಿ ಶ್ರೇಣಿ ಮತ್ತು ಸಿಬ್ಬಂದಿಯ ಅರ್ಥವನ್ನು ಸಂಕ್ಷಿಪ್ತವಾಗಿ ವಿವರಿಸಿ ಮತ್ತು ಶ್ರೇಣಿ ಹಾಗೂ ಸಿಬ್ಬಂದಿ ಪದ್ಧತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ವಿವರಿಸಿ.

**15.** ಸಂಸದೀಯ ಸರ್ಕಾರ ವ್ಯವಸ್ಥೆಯಲ್ಲಿ, ಆಡಳಿತದ ಮೇಲೆ ಪರಿಣಾಮಕಾರಿಯಾದ ಶಾಸನಾತ್ಮಕ ನಿಯಂತ್ರಣ ಸಾಧಿಸುವ ಮಾರ್ಗಗಳನ್ನು ನಿಷ್ಕರ್ಷಿಸಿ.

**16.** ಆಡಳಿತದ ಮೇಲೆ ನ್ಯಾಯಿಕ ನಿಯಂತ್ರಣದ ನ್ಯಾಯಸಮ್ಮತತೆಯನ್ನು ಹಾಗೂ ಅದಕ್ಕಿರುವ ಅವಕಾಶಗಳನ್ನು ಕುರಿತು ವಿಮರ್ಶಾತ್ಮಕವಾಗಿ ಬರೆಯಿರಿ.

**17.** ಒಂದು ಸಂಸ್ಥಾ ವ್ಯವಸ್ಥೆಯನ್ನು ರಚಿಸುವಲ್ಲಿ ಅನುಕ್ರಮ ಶ್ರೇಣಿ ತತ್ವವನ್ನು ವಿಶ್ಲೇಷಿಸಿ. ಸಂಸ್ಥೆಗಳಿಗೆ ಈ ತತ್ವವನ್ನು ಅನ್ವಯಿಸುವುದರಲ್ಲಿ ಏನಾದರೂ ಸಮಸ್ಯೆಗಳಿವೆ ಎಂದು ಅನಿಸುತ್ತದೆಯೆ ? ವಿವರಿಸಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** Discuss the principles of good budget making and the issue of deficit financing in budgets.

**19.** Discuss any one model of the process of public policy making which according to you reflects the type of policy making process in developing states. You can represent the policy making model with a diagram if appropriate.

**20.** Examine the evolution of Leadership Theory in Public Administration.

**21.** Career development benefits both the individual and the organisation. Discuss.

**22.** Explain the bureaucratic theory of organisation with reference to contributions of prominent thinkers.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಉತ್ತಮ ಬಜೆಟ್ ತಯಾರಿಕೆಯ ತತ್ವಗಳನ್ನು ಮತ್ತು ಬಜೆಟ್ಟುಗಳಲ್ಲಿ ಹಣಕಾಸಿನ ಕೊರತೆ — ಈ ಸಂಗತಿಗಳನ್ನು ಕುರಿತು ಚರ್ಚಿಸಿ.

**19.** ನಿಮ್ಮ ದೃಷ್ಟಿಯಲ್ಲಿ ಅಭಿವೃದ್ಧಿಶೀಲ ರಾಜ್ಯಗಳ ನೀತಿ ನಿರೂಪಣಾ ಪ್ರಕ್ರಿಯೆಯ ಮಾದರಿಯನ್ನೇ ಪ್ರತಿಬಿಂಬಿಸುತ್ತದೆ ಎಂದು ಅನ್ನಿಸುವಂಥ ಯಾವುದಾದರೊಂದು ಮಾದರಿಯ ಸಾರ್ವಜನಿಕ ನೀತಿ ನಿರೂಪಣಾ ಪ್ರಕ್ರಿಯೆಯನ್ನು ಕುರಿತು ಚರ್ಚಿಸಿ. ಸೂಕ್ತವೆನಿಸಿದರೆ ಈ ನೀತಿ ತಯಾರಿಕಾ ಮಾದರಿಯನ್ನು ಒಂದು ರೇಖಾಚಿತ್ರದೊಂದಿಗೂ ತೋರಿಸಬಹುದು.

**20.** ಸಾರ್ವಜನಿಕ ಆಡಳಿತದಲ್ಲಿ, ನಾಯಕತ್ವ ಸಿದ್ಧಾಂತವು ವಿಕಾಸಗೊಂಡ ಕ್ರಮವನ್ನು ಪರಿಶೀಲಿಸಿ.

**21.** ವೃತ್ತಿಜೀವನದ ಅಭಿವೃದ್ಧಿಯಿಂದ ವ್ಯಕ್ತಿ ಮತ್ತು ಸಂಸ್ಥೆಗಳೆರಡಕ್ಕೂ ಅನುಕೂಲ. ಚರ್ಚಿಸಿ.

**22.** ಪ್ರಮುಖ ಚಿಂತಕರು ನೀಡಿರುವ ಕೊಡುಗೆಗಳನ್ನು ಉಲ್ಲೇಖಿಸುವುದರೊಂದಿಗೆ ಸಂಸ್ಥಾ ವ್ಯವಸ್ಥೆಯ ಅಧಿಕಾರಶಾಹಿ ಸಿದ್ಧಾಂತವನ್ನು ವಿವರಿಸಿ.

# 2010

## ಸಾರ್ವಜನಿಕ ಆಡಳಿತ

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

**ಸೂಚನೆಗಳು**

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.
ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.

SEAL

***Note :*** *The English version of the instructions is printed on the front cover of this question paper.*

20/2

# 2010

## PUBLIC ADMINISTRATION

### Paper 2

*Time : 3 Hours ]* *[ Maximum Marks : 300*

SEAL

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) Outline five important landmarks in the evolution of Indian Administration through the British Period.

   (b) Underline five important tenets which constitute the core philosophy of Indian Constitution.

   (c) What are the five characteristics of Parliamentary Democracy in India which are relevant to Public Administration ?

   (d) Examine five unique features of Indian Federalism.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಬ್ರಿಟಿಷರ ಕಾಲದಿಂದಾರಂಭಿಸಿ ಭಾರತೀಯ ಆಡಳಿತವು ವಿಕಾಸಗೊಂಡ ಕ್ರಮದ ಪ್ರಮುಖವಾದ ಐದು ಮೈಲಿಗಲ್ಲುಗಳನ್ನು ನಿರೂಪಿಸಿ.

   (ಬಿ) ಭಾರತೀಯ ಸಂವಿಧಾನದ ಮೂಲ ಸಿದ್ಧಾಂತವು ಯಾವ ಐದು ಪ್ರಮುಖ ತತ್ವಗಳನ್ನು ಆಧರಿಸಿ ರೂಪುಗೊಂಡಿದೆ ಎಂಬುದನ್ನು ವಿವರಿಸಿ.

   (ಸಿ) ಭಾರತದ ಸಂಸದೀಯ ಪ್ರಜಾಪ್ರಭುತ್ವದ ಯಾವ ಐದು ವಿಶಿಷ್ಟ ಲಕ್ಷಣಗಳು ಸಾರ್ವಜನಿಕ ಆಡಳಿತಕ್ಕೆ ಪ್ರಸ್ತುತವಾಗಿವೆ ?

   (ಡಿ) ಭಾರತೀಯ ಸಂಯುಕ್ತ ರಾಷ್ಟ್ರವಾದದ (Federalism) ಐದು ವಿಶಿಷ್ಟ ಲಕ್ಷಣಗಳನ್ನು ಪರಿಶೀಲಿಸಿ.

## PART B

*10×10=100*

*Answer each question in about 100 words. Each question carries 10 marks.*

2. Briefly discuss the origin and role of Cabinet Secretariat in India.

3. Describe the role of Cabinet Committees in India as essential to relieving the Cabinet of preliminary work.

4. Elucidate arguments in favour of the tenure system in the Central Secretariat in India.

5. Examine how the role of the District Collector has changed today from the days of the British Raj.

6. Write a note on recruitment to the Indian Administrative Service.

7. Examine the notion of Collective Responsibility within the Cabinet system of Government in India.

8. Examine issues of autonomy and accountability in Public undertakings.

9. Discuss the role of the Central Vigilance Commission and integrity in Administration.

10. Elucidate the functions of the State Secretariat.

11. In your evaluation, are the measures for redressal of Citizens Grievances adequate at the Central Government level ?

## ಭಾಗ B

10×10=100

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಭಾರತದಲ್ಲಿ ಸಂಪುಟ ಸಚಿವಾಲಯದ ಉಗಮ ಮತ್ತು ಪಾತ್ರವನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿ.

**3.** ಪೂರ್ವಭಾವೀ ಕೆಲಸಗಳಿಂದ ಸಂಪುಟಕ್ಕೆ ಬಿಡುಗಡೆ ದೊರಕಿಸುವ ದೃಷ್ಟಿಯಿಂದ ಭಾರತದಲ್ಲಿ ಸಂಪುಟ ಸಮಿತಿಗಳು ಎಷ್ಟು ಅವಶ್ಯಕವಾದ ಪಾತ್ರವಹಿಸುತ್ತಿವೆ ಎಂಬುದನ್ನು ವಿವರಿಸಿ.

**4.** ಭಾರತದ ಕೇಂದ್ರೀಯ ಸಚಿವಾಲಯದಲ್ಲಿರುವ ಕರಾರಿನ ಹಿಡುವಳಿ ವ್ಯವಸ್ಥೆಯ (Tenure system) ಪರವಾಗಿ ಮಂಡಿತವಾದ ವಾದಗಳನ್ನು ನಿರೂಪಿಸಿ.

**5.** ಬ್ರಿಟಿಷ್ ರಾಜ್ಯದ ದಿನಗಳಲ್ಲಿದ್ದ ಜಿಲ್ಲಾಧಿಕಾರಿಯ ಪಾತ್ರ ಇಂದಿನ ದಿನಗಳಲ್ಲಿ ಹೇಗೆ ಬದಲಾಗಿದೆ ಎಂಬುದನ್ನು ಪರಿಶೀಲಿಸಿ.

**6.** ಭಾರತೀಯ ಆಡಳಿತ ಸೇವೆಗೆ ನಡೆಯುವ ನೇಮಕಾತಿಯನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

**7.** ಭಾರತದಲ್ಲಿ ಸರ್ಕಾರದ ಸಂಪುಟ ವ್ಯವಸ್ಥೆಯೊಳಗಿನ ಸಾಮೂಹಿಕ ಜವಾಬ್ದಾರಿಕೆಯ ವಿಚಾರವನ್ನು ಕುರಿತು ಪರಿಶೀಲಿಸಿ.

**8.** ಸಾರ್ವಜನಿಕ ಉದ್ಯಮಗಳ ಸ್ವಾಯತ್ತತೆ ಮತ್ತು ಉತ್ತರದಾಯಿತ್ವದ ವಿಷಯಗಳನ್ನು ಕುರಿತು ಪರಿಶೀಲಿಸಿ.

**9.** ಆಡಳಿತದಲ್ಲಿ ಕೇಂದ್ರೀಯ ಜಾಗೃತಿ ಆಯೋಗ ಹಾಗೂ ಪ್ರಾಮಾಣಿಕತೆಯ ಪಾತ್ರವನ್ನು ಕುರಿತು ಚರ್ಚಿಸಿ.

**10.** ರಾಜ್ಯ ಸಚಿವಾಲಯದ ಕಾರ್ಯಗಳನ್ನು ವಿಶದಪಡಿಸಿ.

**11.** ನಾಗರಿಕರ ಸಂಕಷ್ಟಗಳ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ಮಟ್ಟದಲ್ಲಿ ಕೈಗೊಂಡಿರುವ ಕ್ರಮಗಳು ಸಮರ್ಪಕವಾಗಿವೆ ಎಂದು ನಿಮಗನ್ನಿಸುವುದೆ ? ಮೌಲ್ಯಮಾಪನ ಮಾಡಿ.

6×15=90

## PART C

*Answer each question in about 150 words. Each question carries 15 marks.*

**12.** Examine the Constitutional provisions for welfare of SCs and STs which should be guiding principles for administration in India.

**13.** Analyse the role of the Metropolitan Planning Committee in planning in a metropolitan area.

**14.** Evaluate the administrative reforms initiated within Indian administrative system since the 1990s.

**15.** Is the office of the CAG really effective in controlling public expenditure in India ? Give reasons for your answer.

**16.** Discuss the implementation of the flagship special development programme under the Mahatma Gandhi National Rural Employment Guarantee Act.

**17.** Analyse whether the Prime Minister in India is *primus inter pares* among his Council of Ministers and give reasons for your answer.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಪ.ಜಾ. ಮತ್ತು ಪ.ಪಂ.ಗಳ ಕಲ್ಯಾಣಕ್ಕೆ ಸಂಬಂಧಿಸಿದಂತೆ, ಭಾರತದಲ್ಲಿ ಆಡಳಿತಕ್ಕೆ ಮಾರ್ಗದರ್ಶಿ ಸೂತ್ರಗಳಂತಿರಬೇಕಾದ ಸಾಂವಿಧಾನಿಕ ಉಪಬಂಧಗಳು ಯಾವುವು ? ಪರಿಶೀಲಿಸಿ.

**13.** ಒಂದು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ಯೋಜನೆಯನ್ನು ರೂಪಿಸುವುದಕ್ಕಾಗಿ, ಮೆಟ್ರೋಪಾಲಿಟನ್ ಯೋಜನಾ ಸಮಿತಿಯ ಪಾತ್ರವನ್ನು ಕುರಿತಂತೆ ವಿಶ್ಲೇಷಿಸಿ.

**14.** 1990 ರಿಂದ ಭಾರತೀಯ ಆಡಳಿತ ಪದ್ಧತಿಯ ವ್ಯಾಪ್ತಿಯೊಳಗೆ ಆರಂಭಿಸಲಾದ ಆಡಳಿತಾತ್ಮಕ ಸುಧಾರಣೆಗಳ ಮೌಲ್ಯಮಾಪನ ಮಾಡಿ.

**15.** ಭಾರತದಲ್ಲಿ ಸಾರ್ವಜನಿಕ ಖರ್ಚು ವೆಚ್ಚಗಳನ್ನು ನಿಯಂತ್ರಿಸುವುದಕ್ಕೆ CAG ಯ ಅಧಿಕಾರ ವ್ಯವಸ್ಥೆ ನಿಜಕ್ಕೂ ಪರಿಣಾಮಕಾರಿಯಾಗಿದೆಯೆ ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ನೀಡಿ.

**16.** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಅನುಷ್ಠಾನಗೊಳಿಸಲಾದ ಫ್ಲಾಗ್‌ಶಿಪ್ ವಿಶೇಷ ಅಭಿವೃದ್ಧಿ ಕಾರ್ಯಕ್ರಮವನ್ನು ಕುರಿತು ಚರ್ಚಿಸಿ.

**17.** ಭಾರತದಲ್ಲಿ ಪ್ರಧಾನ ಮಂತ್ರಿಯವರು ತಮ್ಮ ಸಚಿವ ಮಂಡಳಿಯಲ್ಲಿ *primus inter pares* ಆಗಿರುತ್ತಾರೆಯೆ ಎಂಬುದನ್ನು ವಿಶ್ಲೇಷಿಸಿ ಮತ್ತು ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿ.

## PART D

3×30=90

*Answer any* **three** *of the following questions, each in about 300 words. Each question carries 30 marks.*

**18.** What are the salient features of the $74^{th}$ Amendment for improving autonomy and functioning of urban local bodies ?

**19.** The President of India can legitimately assume all powers and become the Real Head instead of being just a nominal head. Discuss.

**20.** Examine the criticality of implementing the Right to Education in transforming the face of India.

**21.** Analyse whether the provisions of $73^{rd}$ Amendment Act in its inclusive and participatory dimension have the potential for rural transformation and development of India in the long run.

**22.** Harmonious Minister-Secretary relations are critical for the smooth functioning of administration in a Parliamentary system of Government in India. Discuss.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆ ಮತ್ತು ಕಾರ್ಯ ನಿರ್ವಹಣೆಯನ್ನು ಸುಧಾರಿಸುವುದಕ್ಕಾಗಿ ಮಾಡಲಾದ 74ನೇ ತಿದ್ದುಪಡಿಯ ವಿಶಿಷ್ಟ ಲಕ್ಷಣಗಳೇನು ತಿಳಿಸಿ.

**19.** ಭಾರತದ ರಾಷ್ಟ್ರಪತಿಯವರು ಎಲ್ಲ ಅಧಿಕಾರಗಳನ್ನು ನ್ಯಾಯ ಸಮ್ಮತವಾಗಿಯೇ ವಹಿಸಿಕೊಳ್ಳಬಹುದು ಮತ್ತು ಕೇವಲ ನಾಮಮಾತ್ರ ಮುಖ್ಯಸ್ಥರಾಗಿರುವುದಕ್ಕೆ ಬದಲಾಗಿ ನಿಜವಾದ ಮುಖ್ಯಸ್ಥರೇ ಆಗಬಹುದು. ಚರ್ಚಿಸಿ.

**20.** ಭಾರತದ ನೋಟವನ್ನು ಪರಿವರ್ತಿಸುವುದಕ್ಕಾಗಿ ಶಿಕ್ಷಣದ ಹಕ್ಕನ್ನು ಜಾರಿಗೊಳಿಸುವುದರಲ್ಲಿರುವ ವೈಚಾರಿಕತೆಯನ್ನು ಪರಿಶೀಲಿಸಿ.

**21.** 73ನೇ ತಿದ್ದುಪಡಿ ಅಧಿನಿಯಮದ ಉಪಬಂಧಗಳು ಅದರ ಸಮಾವಿಷ್ಟ ಮತ್ತು ಸಹಭಾಗಿತ್ವದ ಆಯಾಮವನ್ನು ಒಳಗೊಂಡಂತೆ ದೀರ್ಘಾವಧಿಯಲ್ಲಿ ಗ್ರಾಮೀಣ ಪರಿವರ್ತನೆ ಹಾಗೂ ಭಾರತದ ಅಭಿವೃದ್ಧಿಯನ್ನು ಸಾಧಿಸುವ ಸಾಮರ್ಥ್ಯ ಹೊಂದಿವೆಯೆ ? ವಿಶ್ಲೇಷಿಸಿ.

**22.** ಭಾರತದ ಸಂಸದೀಯ ವ್ಯವಸ್ಥೆಯ ಸರ್ಕಾರದಲ್ಲಿ ಆಡಳಿತವು ಸುಗಮವಾಗಿ ನಡೆಯ ಬೇಕಾದರೆ ಸಚಿವರು ಕಾರ್ಯದರ್ಶಿಗಳ ನಡುವೆ ಸಾಮರಸ್ಯ ಸಂಬಂಧವಿರುವುದು ನಿರ್ಣಾಯಕವಾಗಿದೆ. ಚರ್ಚಿಸಿ.

# 2010

## ಸಾರ್ವಜನಿಕ ಆಡಳಿತ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

**ಸೂಚನೆಗಳು**

ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.

ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.

ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.

ಭಾಗ *A*, *B* ಮತ್ತು *C* ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.
ಭಾಗ *D* ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.

SEAL

***Note :*** *The English version of the instructions is printed on the front cover of this question paper.*